<u>ಸಾಕ್ಷಿಯನ್ನು ದಿನಾಂಕಃ **28.03.2025** ರಂದು ಕರೆಯಿಸಿ ಪ್ರಮಾಣ ವಚನ **ಭೋದಿಸಲಾಯಿತು.**</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ. ಡಿ ಎಸ್ ವಕೀಲರಿಂದ:</u>

ನಾನು ಬೆಂಗಳೂರಿನಲ್ಲಿ ಮೊದಲು 15 ವರ್ಷಗಳು ವಾಸವಿದ್ದು, ಈಗ ಊರಿನಲ್ಲಿ ವಾಸಿಸಲು ಆರಂಭಿಸಿದ್ದು 7 ವರ್ಷಗಳಾಗಿದ್ದು, ಈಗಲೂ ವ್ಯವಹಾರ ಬೆಂಗಳೂರಿನಲ್ಲಿದೆ. ನಾನು 7 ವರ್ಷಗಳಿಂದ ಊರಿನಲ್ಲಿರುವ ವಿಳಾಸವನ್ನು ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲಿಲ ತಿಳಿಸಿಲ್ಲ ಉಳಿದ ಪ್ರತಿವಾದಿಗಳು ಅವರ ಪರವಾಗಿ ಸಾಕ್ಷ್ಯ ನುಡಿಯಲು ಅಧಿಕಾರ ಪತ್ರ ನೀಡಿದ್ದಾರೆಯೇ ಎಂದರೆ ಸಾಕ್ಷಿಯು ತಮ್ಮ ಕಮಿಟಿಯಲ್ಲಿ ತೀರ್ಮಾನವಾಗಿರುತ್ತದೆ ಎಂದು ನುಡಿಯುತ್ತಾರೆ. ಆ ರೀತಿ ತೀರ್ಮಾನವಾದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ವಾದಿಗಳೊಂದಿಗೆ ನಮಗೆ ಯಾವುದೇ ದ್ವೇಷ ಇರುವುದಿಲ್ಲ. ವಾದಿಗಳು ನಮಗೆ ದೇವಸ್ಥಾನದ ವಿಚಾರದಲ್ಲಿ ತೊಂದರೆ ಕೊಡುತ್ತಿದ್ದಾರೆ.

2. ದಾವಾ ಆಸ್ತಿಯ ವಿವರ, ಚೆಕ್ಕುಬಂದಿ ಸರಿ ಇರುತ್ತದೆ. ದಾವಾ ಆಸ್ತಿಯಲ್ಲಿರುವ ದೇವಿಯನ್ನು ನಮ್ಮ ಪೂರ್ವಜರ ಕಾಲದಿಂದಲೂ ಭಕ್ತರಾಗಿ ಅದೇ ದೇವಿಯ ಒಕ್ಕಲುತನವರಾಗಿದ್ದು, ಸದರಿ ದೇವಿಯನ್ನು ಪೂಜಿಸುತ್ತಾ ಆರಾಧಿಸುತ್ತಾ ಬಂದಿದ್ದೇವೆ. ಸದರಿ ವಿಚಾರವನ್ನು ನನ್ನ ತಕರಾರಿನಲ್ಲಿ ಬರೆಸಿರುವುದಿಲ್ಲ. ಸಾಕ್ಷಿ ಮುಂದುವರೆದು, ತಾನು ಕಮಿಟಿ ಪರವಾಗಿ ನ್ಯಾಯಾಲಯಕ್ಕೆ ಬಂದ ಕಾರಣ ತಮ್ಮ ವಂಶದ ಕುರಿತು ನಮೂದಿಸಿರುವುದಿಲ್ಲ. ವಾದಿ ಈ ದಾವೇಯಲ್ಲಿ ಕೋರಿರುವ ಭಾಗಶಃ ಪ್ರಾರ್ಥನೆ ತಪ್ಪಿರುತ್ತದೆ. ವಾದಿಯು ಈ ದಾವೇಯಲ್ಲಿ ದಾವಾ ಆಸ್ತಿ ತಮ್ಮ ದೇವಸ್ಥಾನ ತಮ್ಮ ಎಂದು

ಕೋರಿರುವ ಪ್ರಾರ್ಥನೆ ತಪ್ಪಿರುತ್ತದೆ. ನಾನು ಸಲ್ಲಿಸಿರುವ ಮುಖ್ಯ ವಿಚಾರಣೆ ಪ್ರಮಾಣ ಪತ್ರ ನಮ್ಮ ಕಮಿಟಿಯ ಎಲ್ಲಾ ಸದಸ್ಯರು ಮಾಹಿತಿ ನೀಡಿದ ನಂತರ ತಯಾರಿಸಲಾಗಿದೆ. ವಾದಿ ಈ ದಾವೆಯನ್ನು ಏನು ಪರಿಹಾರ ಕೋರಿ ಸಲ್ಲಿಸಿರುತ್ತಾರೆ ಎಂದು ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿಯು ದೇವಸ್ಥಾನವಾಗಿರುವ ಕಾರಣ ಗ್ರಾಮಸ್ಥರು ಮತ್ತು ಸಾರ್ವಜನಿಕರ ಸ್ವತ್ತಾಗಿರುತ್ತದೆ. ದಾವಾ ಆಸ್ತಿಯ ಕಂದಾಯ ದಾಖಲೆಗಳನ್ನು ನೋಡಿರುತ್ತೇನೆ. ಸದರಿಯಂತೆ ನಾನು ನೋಡಿದ ದಾಖಲೆಗಳು ಮಾಯಮ್ಮ ದೇವಿ ದೇವಸ್ಥಾನದ ಹೆಸರಿನಲ್ಲಿರುತ್ತದೆ.

3. ನಾನು ನನ್ನ ಮುಖ್ಯವಿಚಾರಣೆಯಲ್ಲಿ ದಾವಾ ಆಸ್ತಿ ಮಾಯಣ್ಣ ಮತ್ತು ಹುಚ್ಚೇಗೌಡರ ಸ್ವಂತ ದೇವಸ್ಥಾನ ಎಂದು ಬರೆಸಿಲ್ಲ. ನಾನು ಮಾಯಣ್ಣನವರನ್ನು ಮಾತ್ರ ನೋಡಿದ್ದೆ.. ಹುಚ್ಚೇಗೌಡರು ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮಾಯಣ್ಣನವರನ್ನು ನನಗೆ 6-7 ವರ್ಷಗಳು ಇದ್ದಾಗ ನೋಡಿದ್ದೆ. ನನಗೆ 6-7 ವರ್ಷ ಇದ್ದಾಗ ಮಾಯಣ್ಣನವರು ದಾವಾ ಆಸ್ತಿಯಲ್ಲಿ ಪೂಜೆ ನೆರವೇರಿಸುತ್ತಿದ್ದರು ಎಂದರೆ ಸಾಕ್ಷಿಯು ನನಗೆ ನೆನಪಿಲ್ಲವೆಂದು ನುಡಿಯುತ್ತಾರೆ. ನನಗೆ ಬುದ್ದಿ ಬಂದ ನಂತರ ದಾವಾ ಆಸ್ತಿಯ ದೇವಿಯನ್ನು ನಮ್ಮ ಒಕ್ಕಲುತನದವರು ಪೂಜೆ ಮಾಡುತ್ತಿದ್ದರು. ನಾನು ಛತ್ರದ ಮಾಯಣ್ಣಗೌಡರ ವಂಶಸ್ಥನಾಗಿರುತ್ತೇನೆ. ನಾನು ಛತ್ರದ ಮಾಯಣ್ಣಗೌಡರ ವಂಶಸ್ಥ ಎಂದು ತೋರಿಸಲು ನ್ಯಾಯಾಲಯದ ಮುಂದೆ ದಾಖಲೆ ಹಾಜರುಪಡಿಸಿಲ್ಲ. ನಾನು ಛತ್ರದ ಮಾಯಣ್ಣಗೌಡರ ವಂಶಸ್ಥ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ.

4. ದಾವೇ ಹಾಕುವ ಪೂರ್ವದ ಆರು ತಿಂಗಳ ಹಿಂದೆ ದಾವಾ ಆಸ್ತಿಯ ಬೀಗದ ಕೀ ವಾದಿಯ ಬಳಿ ಇತ್ತು. ದಾವೇ ಹೂಡುವ ಆರು ತಿಂಗಳ ಹಿಂದೆ 3 ಮತ್ತು 4 ನೇ ವಾದಿಗಳು ಭಕ್ತರು ಬಂದಾಗ ದೇವಸ್ಥಾನದ ಬಾಗಿಲನ್ನು ತೆರೆದು ಪೂಜೆ ಕಾರ್ಯ ಮಾಡಿಕೊಡುತ್ತಿದ್ದರು. ಸದರಿ ಬೀಗದ ಕೀ ಆಗಾಗ ವಾದಿಗಳ ಮತ್ತು ನಮ್ಮ ಬಳಿ ಇರುತ್ತಿತ್ತು ಎಂದು ನುಡಿಯುತ್ತಾರೆ. ಸದರಿ ಬೀಗದ ಕೀ ವಿಚಾರವನ್ನು ನನ್ನ ಪ್ರತಿವಾದ ಪತ್ರ ಮತ್ತು ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ . ದಾವಾ ದೇವಸ್ಥಾನದ ಕೀ ಎಲ್ಲಾ ಸಮಯದಲ್ಲೂ ವಾದಿಗಳ ಬಳಿ ಇತ್ತು ಎಂದರೆ ಸರಿಯಲ್ಲ.

5. ದಾವಾ ದೇವಸ್ಥಾನದ ಆಭರಣಗಳು, ರೇಷ್ಮೆ ವಸ್ತ್ರಗಳು ವಾದಿಗಳ ಬಳಿ ಇದ್ದವು. ಸದರಿ ವಸ್ತುಗಳು ಇಂದಿಗೂ ಸಹ ವಾದಿಗಳ ವಶದಲ್ಲಿವೆ ಎಂದರೆ ಸರಿ. ಐದಾರು ವರ್ಷಗಳಿಂದ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿ ಸದರಿ ಒಡವೆ ಮತ್ತು ವಸ್ತ್ರಗಳನ್ನು ವಾದಿಗಳಿಂದ ಪಡೆದು ಹಬ್ಬ ಹರಿದಿನಗಳನ್ನು ಪೂರ್ಣಗೊಳಿಸಿ ಮತ್ತೇ ವಾದಿಗಳಿಗೆ ಹಸ್ತಾಂತರಿಸುತ್ತಿದ್ದೆವು ಎಂದರೆ ಸರಿ. ಸಾಕ್ಷಿ ಮುಂದವರೆದು, ದೇವರ ಒಡವೆಗಳನ್ನು ವಾದಿಗಳು ತಾವು ಮಾಡಿಸಿದ್ದು ಎಂದು ಹೇಳುತ್ತಿದ್ದುದರಿಂದ, ಗ್ರಾಮಸ್ಥರೆಲ್ಲಾ ಮತ್ತೇ ಒಡವೆಗಳನ್ನು ದೇವರಿಗೆ ಮಾಡಿಸಲಾಗಿತ್ತು ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನ್ಯಾಯಾಲಯದ ಮುಂದೆ ಒಡವೆಗಳನ್ನು ಕೋರಿ ಸಲ್ಲಿಸುತ್ತಿದ್ದ ಅರ್ಜಿಯಲ್ಲಿ ಸಲ್ಲಿಸಿರಲಿಲ್ಲ. ಇತ್ತೀಚೆಗೆ ಒಡವೆ ಮಾಡಿಸಿದ ಕುರಿತು ಅವಶ್ಯಕತೆ ಇಲ್ಲ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ

ಸದರಿ ಒಡವೆಗಳನ್ನು ಭಕ್ತಾದಿಗಳು ಮಾಡಿಸಿಕೊಟ್ಟಿರುತ್ತಾರೆ. ಭಕ್ತಾದಿಗಳು ಆ ರೀತಿ ಒಡವೆ ಕೊಟ್ಟ ಕುರಿತು ನಮೂದು ಮಾಡಿ ರೆಸಲ್ಯೂಷನ್ ಮಾಡಲಾಗಿದೆ. ಭಕ್ತಾದಿಗಳು ಆ ರೀತಿ ಅಂದಾಜು 10 ಗ್ರಾಂ ಚಿನ್ನ ಮತ್ತು 1 ಕೆಜಿ 900 ಗ್ರಾಂ ಬೆಳ್ಳಿ ಆಭರಣಗಳನ್ನು ನೀಡಿರುತ್ತಾರೆ.

6. ನಮ್ಮ ಸಂಘ 2018 ರಲ್ಲಿ ಆರಂಭವಾಗಿರುತ್ತದೆ. 2018 ಕ್ಕೂ ಪೂರ್ವದಲ್ಲಿ ದಾವಾ ಆಸ್ತಿಯ ದೇವಸ್ಥಾನವನ್ನು ವಂಶಸ್ಥರು ಮತ್ತು ವಾದಿಗಳು ನಡೆಸಿಕೊಂಡು ಬರುತ್ತಿದ್ದರು. ನಾನು ಹೇಳುವ ದೇವಸ್ಥಾನವನ್ನು ನೋಡಿಕೊಳ್ಳುತ್ತಿದ್ದ ವಂಶಸ್ಥರೆಂದರೆ ಕೆಂಪಮ್ಮ, ಕಾಡಮ್ಮ, ಹುಚ್ಚೇಗೌಡರ ತಾಯಿ ಮತ್ತು ವಾದಿಗಳ ವಂಶಸ್ಥರು ಇರುತ್ತಾರೆ. ಕೆಂಪಮ್ಮ ಮತ್ತು ಕಾಡಮ್ಮ ನವರ ಮುಂದಿನ ತಲೆಮಾರು ನಮ್ಮ ಸಂಘದಲ್ಲಿದೆ. ನಾನು ಕಾಡಮ್ಮನವರ ವಂಶಸ್ಥನವರಾಗಿರುತ್ತೇನೆ. ಕೆಂಪಮ್ಮ, ಕಾಡಮ್ಮ ಬೀಚನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದರು.

7. ವಾದಿಗಳು ತಮ್ಮ ಕುಟುಂಬದಲ್ಲಿನ ವೈಯಕ್ತಿಕ ಸಮಸ್ಯೆಗಳಿಂದ ದೇವಸ್ಥಾನದ ಪೂಜೆಯನ್ನು ನಿಲ್ಲಿಸಿದ್ದರು. ನಾವು ಪರಿಪರಿಯಾಗಿ ಅವರನ್ನು ಕೇಳಿದರೂ, ವಾದಿಗಳು ಪೂಜೆಯನ್ನು ಮಾಡಲಿಲ್ಲ ಮತ್ತು ಬೀಗದ ಕೀಯನ್ನು ಸಹ ನೀಡಲಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಪೂಜೆ ಕಾರ್ಯಗಳು ಐದೂವರೆ ಇಂದ ಆರು ತಿಂಗಳುಗಳ ಕಾಲ ನಿಂತು ಹೋಗಿತ್ತು. ದೇವಸ್ಥಾನದ ಬೀಗವನ್ನು ಹಿಂದಿರುಗಿಸುವಂತೆ ನೋಟಿಸ್ ನೀಡಿರಲಿಲ್ಲ. ದಾವಾ ಆಸ್ತಿ ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಿಲ್ಲ.

ವಾದಿಗಳು ಸಲ್ಲಿಸಿರುವ ದಾಖಲೆಗಳನ್ನು ನಾನು ತಿಳಿದುಕೊಂಡಿದ್ದು, ಅವುಗಳಲ್ಲಿ ಕೆಲವು ಸುಳ್ಳು ಇರುತ್ತವೆ. ನಿಡಿ.1 ನ್ನು ಗ್ರಾಮಸ್ಥರು ಸಲ್ಲಿಸಿರುತ್ತಾರೆ. ನಿಡಿ.1 ರಲ್ಲಿ ಗ್ರಾಮಸ್ಥರು ಪೂಜೆ ಸಲ್ಲಿಸುತ್ತಿದ್ದ ಬಗ್ಗೆ ನಮೂದಾಗಿಲ್ಲ. ನಿಡಿ.2 ಮತ್ತು 3 ನ್ನು ಗ್ರಾಮಸ್ಥರು ಬರೆದಿರುತ್ತಾರೆ.

8. ಏಳೆಂಟು ವರ್ಷಗಳಿಂದ ನಮ್ಮ ಸಂಘ ಆರಂಭವಾದ ನಂತರ ನಾನು ಕೊಂಡ ಹಾಯುತ್ತಿದ್ದೇನೆ. ಅದಕ್ಕೂ ಮೊದಲು 3 ನೇ ವಾದಿಯ ತಂದೆ ವಗಂಗ ಮಾಯಣ್ಣನವರು ಕೊಂಡ ಹಾಯುತ್ತಿದ್ದರು. 3 ನೇ ವಾದಿ ಸಹ ಒಂದು ವರ್ಷ ಕೊಂಡ ಹಾಯ್ದಿರುತ್ತಾರೆ. ನಿಡಿ.5 ರಲ್ಲಿ ವಾದಿಗಳನ್ನು ಸೇರಿಸಿಲ್ಲ ಎಂದರೆ ಸಾಕ್ಷಿಯು ದಾವೇ ಬಾಕಿ ಇದ್ದ ಕಾರಣ, ಸೇರಿಸಿಲ್ಲವೆಂದು ನುಡಿಯುತ್ತಾರೆ. ಸದರಿ ವಿಚಾರವನ್ನು ಅವಶ್ಯಕತೆ ಇಲ್ಲದ ಕಾರಣ ನಿಡಿ.5 ರಲ್ಲಿ ನಮೂದಿಸಿಲ್ಲ. ನಿಡಿ.8 ರ ಉತ್ತರದಲ್ಲಿ ತೋರಿಸಿರುವ ಹಿಡುವಳಿ ಜಮೀನು ಕಾಡಮ್ಮ ಕೆಂಪಮ್ಮನವರಿಗೆ ಸೇರಿದ್ದು. ನಾನು ಕಾಡಮ್ಮನ ಮುಮ್ಮಗನಾಗಿರುತ್ತೇನೆ. ನಿಡಿ.8 ರ ದಕ್ಷಿಣದಲ್ಲಿ ತೋರಿಸಿರುವ ಸ್ವಂತ ಜಾಗ ಎಂದರೆ ದೇವಸ್ಥಾನದ ಅಂಗಳವಾಗಿರುತ್ತದೆ.

9. ನಮ್ಮ ಗ್ರಾಮದಲ್ಲಿ 130 ರಿಂದ 150 ಮನೆಗಳು ಇದ್ದು, ಅಂದಾಜು 500 ಜನಸಂಖ್ಯೆ ಇದೆ. ನಮ್ಮ ಗ್ರಾಮಸ್ಥರ ಒಪ್ಪಿಗೆ ಪಡೆಯದೇ ನಮ್ಮ ಸಂಘವನ್ನು ಕಟ್ಟಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ದೇವಸ್ಥಾನದ ಮೇಲೆ ನಮ್ಮ ಸಂಘಕ್ಕೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ದಾವಾ ದೇವಸ್ಥಾನದ ಆಸ್ತಿ ವಾದಿಗಳ ಆಸ್ತಿ ಸ್ವಂತ ಹಕ್ಕಿನ ದೇವಸ್ಥಾನ

ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಕಾರಣದಿಂದ ಹುಚ್ಚೇಗೌಡರು ಮತ್ತು ಛತ್ರದ ಮಾಯಣ್ಣನವರ ಕಾಲದಿಂದಲೂ ವಾದಿಗಳ ಬಳಿ ದೇವಸ್ಥಾನದ ಒಡವೆ, ವಸ್ತ್ರಗಳು ಇದ್ದವು ಎಂದರೆ ಸಾಕ್ಷಿಯು ಒಡವೆ ವಸ್ತ್ರಗಳು ಇರುವುದು ಸರಿ, ಆದರೆ ಅವರ ಸ್ವಂತ ದೇವಸ್ಥಾನ ಅಲ್ಲ ಎಂದು ನುಡಿಯುತ್ತಾರೆ. ವಾದಿಗಳ ಸ್ವಂತ ದೇವಸ್ಥಾನ ಆದ ಕಾರಣ ಬೀಗದ ಕೀ ಅವರ ಬಳಿಯೇ ಇತ್ತು ಎಂದರೆ ಸರಿಯಲ್ಲ. ವಾದಿಗಳ ಕುಟುಂಬದ ಸಮಸ್ಯೆಯಿಂದ ದೇವಸ್ಥಾನದ ಪೂಜೆ ಮಾಡದ ಸಮಯವನ್ನು ದುರುಪಯೋಗಪಡಿಸಿಕೊಂಡು ಸಂಘ ಕಟ್ಟಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಸಂಘಕ್ಕೂ ಮತ್ತು ವಾದಿಯ ಸ್ವಂತ ಹಕ್ಕಿನ ದೇವಸ್ಥಾನಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ

.

ಕುಣಿಗಲ್.